1	2	3	4	5	6	7
24.	ಜುಮ್ಲಾಪೂರ	2.08	4.74	7.044		
25.	ಕಿಲ್ಲಾರಹಟ್ಟಿ	2.81	4.30	6.756		
26.	ತಾವರಗೇರಾ	4.77	5.20	9.085		
27.	ಮೇಣೆದಾಳ	3.00	3.80	6.610		
28.	ಸಂಗನಾಳ	2.84	3.72	6.534		

5767 (6570) ಶ್ರೀ ದೊಡ್ಡನಗೌಡ ಗುಂಡನಗೌಡ ಪಾಟೀಲ್ (ಹುನಗುಂದ): ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 199495ನೇ ಸಾಲಿನಿಂದ ಸರ್ಕಾರಿ ಮತ್ತು ಖಾಸಗಿ ವೈದ್ಯಕೀಯ ಮತ್ತು ದಂತ ವೈದ್ಯಕೀಯ ವ್ಯಾಸಂಗಕ್ಕೆ ಸರ್ಕಾರದ ಮೀಸಲು ಸ್ಥಾನಗಳಲ್ಲಿ ಪ್ರವೇಶ ಪಡೆದು ವೈದ್ಯರಾದವರ ಸಂಖ್ಯೆ ಎಷ್ಟು :

ಆ) ಸರ್ಕಾರದ ಮಹಾವಿದ್ಯಾಲಯದಲ್ಲಿ ಅಭ್ಯಾಸಿಸಿದ ಅಭ್ಯರ್ಥಿಗೆ ಸರ್ಕಾರ ವಿನಿಯೋಗಿಸುವ ಹಣ ಮತ್ತು ಖಾಸಗಿ ಮಹಾ ವಿದ್ಯಾಲಯದಲ್ಲಿ ಸರ್ಕಾರದ ಹಂಚಿಕೆ ಸ್ಥಾನದಲ್ಲಿ ವ್ಯಾಸಂಗ ಮಾಡಿ ವೈದ್ಯನಾಗುವ ಅಭ್ಯರ್ಥಿಗೆ ವಿನಿಯೋಗಿಸುವ ಹಣದ ಮೊತ್ತದಲ್ಲಿ ವ್ಯತ್ಯಾಸವಿದೆಯೇ;

ಇ) ಹಾಗಿದ್ದಲ್ಲಿ, ಎಷ್ಟು ಹಣ ವಿನಿಯೋಗಿಸಲಾಗುತ್ತಿದೆ (ವಿವರ ನೀಡುವುದು);

ಈ) ಸರ್ಕಾರದ ಹಣಸಾರ್ವಜನಿಕರ ಹಣ ಅಲ್ಲವೇ; ಹಾಗಿದ್ದಲ್ಲಿ ಈ ವೈದ್ಯಕೀಯ ವಿದ್ಯಾರ್ಥಿಗಳು, ವೈದ್ಯನಾಗುವ ತನಕ ಸರ್ಕಾರ ವಿನಿಯೋಗಿಸುವ ಈ ಹಣದ ಋಣಮುಕ್ತನಾಗುವ ಸದುದ್ದೇಶದಿಂದ ಕನಿಷ್ಠ ಎರಡು ವರ್ಷ ಗ್ರಾಮೀಣ ಪ್ರದೇಶದಲ್ಲಿ ಕಡ್ಡಾಯವಾಗಿ ಸೇವೆ ಸಲ್ಲಿಸುವ ಕ್ರಮವನ್ನು ತೀವ್ರವೇ ಜಾರಿಗೆ ತರಲಾಗುವುದೇ : ವಿವರ ನೀಡುವುದು?

ಶ್ರೀ ಇಕ್ಬಾಲ್ ಅನ್ಸಾರಿ (ವೈದ್ಯಕೀಯ ಶಿಕ್ಷಣ ಸಚಿವರು)

ಅ) 990.

ಆ) ಇದೆ.

ಇ) ಸರ್ಕಾರಿ ವೈದ್ಯಕೀಯ ಕಾಲೇಜಿನಲ್ಲಿ

ವಾರ್ಷಿಕ ಶುಲ್ಕ – 9,200 ರೂ. ಸರ್ಕಾರಿ ದಂತ ಕಾಲೇಜಿನಲ್ಲಿ ವಾರ್ಷಿಕ ಶುಲ್ಕ – 6,900 ರೂ.

ಖಾಸಗಿ ವೈದ್ಯಕೀಯ ಕಾಲೇಜಿನಲ್ಲಿ:

ಶೇ. 30 ರಷ್ಟು ಸರ್ಕಾರಿ ಸೀಟುಗಳಿಗೆ ಶುಲ್ಕ – 35,000 ರೂ.

ಶೇ. 20 ರಷ್ಟು ಸರ್ಕಾರಿ ಸೀಟುಗಳಿಗೆ ಶುಲ್ಕ – 1,65,000 ರೂ.

ಖಾಸಗಿ ದಂತ ಕಾಲೇಜಿನಲ್ಲಿ

ಶೇ. 30 ರಷ್ಟು ಸರ್ಕಾರಿ ಸೀಟುಗಳಿಗೆ ಶುಲ್ಕ – 25,000 ರೂ.

ಶೇ. 20 ರಷ್ಟು ಸರ್ಕಾರಿ ಸೀಟುಗಳಿಗೆ ಶುಲ್ಕ – 1,00,000 ರೂ.

ಈ) ಸರ್ಕಾರಿ ವೈದ್ಯಕೀಯ ಕಾಲೇಜಿನಲ್ಲಿ ವ್ಯಾಸಂಗ ಮಾಡಿದ ಅಭ್ಯರ್ಥಿಗಳಿಗೆ ಕನಿಷ್ಠ ಒಂದು ವರ್ಷದ ಗ್ರಾಮೀಣ ಸೇವೆಯನ್ನು 200506ನೇ ಸಾಲಿನಿಂದ ಕಡ್ಡಾಯಗೊಳಿಸಲಾಗಿದೆ.